quickmarketreports.com

Date : 30-10-2015

# ಘಾನಾದಲ್ಲಿ ಗೋಡಂಬಿ ಕೈಗಾರಿಕೆ ವಿಸ್ತರಣೆಯ ಬಯಕೆ

ಉತ್ಪಾದನಾ ಹೆಚ್ಚಳ, ಉತ್ತಮ ಸಂಸ್ಕರಣಾ ಸೌಲಭ್ಯ, ಮಾರುಕಟ್ಟೆಯನ್ನು ಗಮನಿಸುವುದು ಮತ್ತು ಸರ್ಟಿಫಿಕೇಶನ್‌ಗಳು ಗೋಡಂಬಿ ಕೈಗಾರಿಕೆಯ ವಿಸ್ತರಣೆಯ ಮಾರ್ಗಗಳೊಂದು ಆಹಾರ ಮತ್ತು ಕೃಷಿ ಸಚಿವಾಲಯದ, ಗೋಡಂಬಿ ವಿಭಾಗದ ಉಪ ನಿರ್ದೇಶಕರಾದ ಸೇಥ್ ಒಸರಿ ಅಕೋಟೋ ಹೇಳಿದರೆನ್ನಲಾಗಿದೆ.

ಮುಂದುವರಿದು ಅವರು ಸರಕಾರ ಅವಶ್ಯ ನಿಯಂತ್ರಣ ಕ್ರಮಗಳನ್ನು ಕೈಗೊಂಡು ಸ್ಪರ್ಧಾತ್ಮಕತೆಗೆ ಒತ್ತು ನೀಡಬೇಕೆಂದರು. ಪೂರೈಕೆಯನ್ನು ಸಂಯೋಜಿಸಿ, ಗುಣಮಟ್ಟ ಕಾಯ್ದುಕೊಂಡು ಸ್ಪರ್ಧಾತ್ಮಕವಾಗಿರಲು ರೈತರೊಂದಿಗೆ ಸಂಪರ್ಕದಲ್ಲಿದ್ದು ಜ್ಞಾನ ಮತ್ತು ತಾಂತ್ರಿಕತೆಯನ್ನು ವಿನಿಮಯಗೊಳಿಸಿ ಸಹಕರಿಸಬೇಕೆಂದು ಕೈಗಾರಿಕಾ ವಲಯಕ್ಕೆ ಕೇಳಿಕೊಂಡರೆನ್ನಲಾಗಿದೆ. ಖಾಸಗಿ ವಲಯದವರನ್ನು ಉತ್ತೇಜಿಸಿ ಖಾಸಗಿ ನರ್ಸರಿಗಳೊಂದಿಗೆ ಸೇರಿ ಉತ್ಪಾದನೆ ಹೆಚ್ಚಳಗೊಳಿಸಬೇಕೆಂದು ಹೇಳಿದರೆನ್ನಲಾಗಿದೆ.